ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ 'ಬಿ' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440, ಚಾಮರಾಜನಗರ ಜಿಲ್ಲೆ**

☎: 08224-252149   🖷: 08224-256051   Email: jsscwk@gmail.com   www.jsscwkgl.org

**ಪ್ರಕಟಣೆ ಕೃಪೆಗಾಗಿ**

## ಸರ್ವರಿಗೂ ಪ್ರಿಯವಾಗುವ ಬಜೆಟ್‌ಗಳು – ಪ್ರೊ.ಆರ್.ಎಂ ಚಿಂತಾಮಣಿ

## ಜೆಎಸ್‌ಎಸ್ ಕಾಲೇಜಿನಲ್ಲಿ ಬಜೆಟ್ ಕುರಿತ ಕಾರ್ಯಾಗಾರ

ಕೊಳ್ಳೇಗಾಲ: ೧೧.೨.೨೦೧೯ ಮುಂಬರುವ ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಮುಂಗಡ ಪತ್ರಗಳು ಸಮಾಜದ ಎಲ್ಲ ವರ್ಗಗಳಿಗೆ ಸಮಾನ ಆದ್ಯತೆ ನೀಡಲು ಪ್ರಯತ್ನಿಸಿವೆ ಎಂದು ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಆರ್.ಎಂ ಚಿಂತಾಮಣಿ ಅಭಿಪ್ರಾಯಿಸಿದರು.

ಪಟ್ಟಣದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ **"ಕೇಂದ್ರ ಮತ್ತು ರಾಜ್ಯ ಬಜೆಟ್–೨೦೧೯–ವಿಶ್ಲೇಷಣೆ"** ಎಂಬ ವಿಷಯದ ಮೇಲೆ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಬಜೆಟ್‌ಗಳಲ್ಲಿ ಬಂಡವಾಳ ಕ್ರೋಢಿಕರಣಕ್ಕೆ ಕೊಟ್ಟಿರುವ ಒತ್ತು ಕಡಿಮೆಯಾಗಿದೆ. ದೂರದೃಷ್ಠಿ ಫಲಿತಾಂಶವಿಟ್ಟುಕೊಂಡು ಆಯವ್ಯಯ ರಚಿಸುವಂತಾದಾಗ ದೇಶದ ಆರ್ಥಿಕ ಸ್ಥಿತಿಯನ್ನು ಸಬಲಗೊಳಿಸಬಹುದಾದರೂ ಕೆಲವೇ ತಿಂಗಳಲ್ಲಿ ಬರುವ ಲೋಕಸಭೆ ಚುನಾವಣೆಯ ದೃಷ್ಠಿಯಲ್ಲಿ ಬಂಡವಾಳ ಕ್ರೋಢಿಕರಣಕ್ಕಿಂತ ಉದಾರದಾನಗಳೇ ಹೆಚ್ಚಿವೆ ಎಂದು ಅಭಿಪ್ರಾಯಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ.ಉಮೇಶ ಮುಂದಿನ ಒಂದು ವರ್ಷ ರಾಜ್ಯ, ದೇಶವನ್ನು ತೂಗಿಸಿಕೊಂಡು ಹೋಗುವ ಮುಂಗಡ ಪತ್ರಕ್ಕೆ ವಿಶೇಷ ಮಹತ್ವವಿದೆ. ಅಭಿವೃದ್ಧಿಗಳಿಗೆ ಪೂರಕವಾಗಿ ಹೊಸ ಹೊಸ ಯೋಜನೆಗಳಿಗೆ ಮುಂಗಡ ಪತ್ರದಲ್ಲಿ ಆದ್ಯತೆಯ ಮೇರೆಗೆ ಅನುಮತಿ ಪಡೆಯುವ ಅಗತ್ಯತೆಯಿರುತ್ತದೆ. ಜನಪ್ರತಿನಿಧಿಗಳು ಪಕ್ಷಭೇದ ಮರೆತು ರಾಜ್ಯ, ದೇಶದ ಆರ್ಥಿಕತೆಯನ್ನು ಸದೃಡಗೊಳಿಸುವತ್ತ ಚಿಂತಿತರಾಗಿ ಮುಂಗಡ ಪತ್ರದ ರಚನೆಯ ಸಂದರ್ಭದಲ್ಲಿಂದಲೂ ತಮ್ಮ ಸಂಪೂರ್ಣ ಸಹಕಾರ ನೀಡುವ ಅವಶ್ಯಕತೆಯಿದೆ ಎಂದು ತಿಳಿಸಿದರು.

ಪ್ರಥಮ ಅಧಿವೇಶನದಲ್ಲಿ ಕೇಂದ್ರದ ಮಧ್ಯಂತರ ಬಜೆಟ್ ಹಾಗೂ ದ್ವಿತೀಯ ಅಧಿವೇಶನದಲ್ಲಿ ರಾಜ್ಯ ಬಜೆಟ್ ಕುರಿತು ಪ್ರೊ.ಆರ್ ಎಂ ಚಿಂತಾಮಣಿಯವರು ವಿಶ್ಲೇಷಿಸುತ್ತ ಸಂಪೂರ್ಣ ಮಾಹಿತಿಯನ್ನು ನೀಡಿದರು.

ವೇದಿಕೆಯಲ್ಲಿ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ.ಹೆಚ್.ಜಿ ನಟರಾಜನ್, ವ್ಯವಹಾರ ನಿರ್ವಹಣಾಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ.ಮಮತ, ಸ್ನಾತಕೋತ್ತರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪ್ರೊ.ಅರ್ಚನ ಉಪಸ್ಥಿತರಿದ್ದರು.

**“ಕೇಂದ್ರ ಮತ್ತು ರಾಜ್ಯ ಬಜೆಟ್–೨೦೧೯–ವಿಶ್ಲೇಷಣೆ”** ಎಂಬ ವಿಷಯದ ಮೇಲೆ ಒಂದು ದಿನದ ಕಾರ್ಯಾಗಾರ ಪ್ರೊ.ಆರ್.ಎಂ ಚಿಂತಾಮಣಿ ರವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಪ್ರೊ.ಅರ್ಚನ, ಪ್ರೊ.ಹೆಚ್.ಸಿ ನಟರಾಜನ್ ಪ್ರಾಚಾರ್ಯ ಪ್ರೊ.ಉಮೇಶ, ಮತ್ತು ಪ್ರೊ.ಮಮತರವರನ್ನು ಕಾಣಬಹುದು.




ಪ್ರೊ.ಆರ್.ಎಂ ಚಿಂತಾಮಣಿರವರು ಉದ್ಘಾಟನಾ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಪ್ರೊ.ಅರ್ಚನ, ಪ್ರೊ.ಹೆಚ್.ಸಿ ನಟರಾಜನ್, ಪ್ರಾಚಾರ್ಯ ಪ್ರೊ.ಉಮೇಶ, ಪ್ರೊ.ಆರ್.ಎಂ ಚಿಂತಾಮಣಿ ಮತ್ತು ಪ್ರೊ.ಮಮತರವರನ್ನು ಕಾಣಬಹುದು



**“ಕೇಂದ್ರ ಮತ್ತು ರಾಜ್ಯ ಬಜೆಟ್–೨೦೧೯–ವಿಶ್ಲೇಷಣೆ”** ಎಂಬ ವಿಷಯದ ಮೇಲೆ ಒಂದು ದಿನದ ಕಾರ್ಯಾಗಾರ. ಚಿತ್ರದಲ್ಲಿ ಪ್ರೊ.ಅರ್ಚನ, ಪ್ರೊ.ಹೆಚ್.ಸಿ ನಟರಾಜನ್, ಪ್ರಾಚಾರ್ಯ ಪ್ರೊ.ಉಮೇಶ, ಪ್ರೊ.ಆರ್.ಎಂ ಚಿಂತಾಮಣಿ ಮತ್ತು ಪ್ರೊ.ಮಮತರವರನ್ನು ಕಾಣಬಹುದು.




ಕಾರ್ಯಗಾರದಲ್ಲಿ ವಿದ್ಯಾರ್ಥಿನಿ ಬಜೆಟ್  ಕುರಿತು ಪ್ರಶ್ನಿಸಿಸುತ್ತಿರುವುದು.



ಕಾರ್ಯಗಾರದಲ್ಲಿ ಭಾಗವಹಿಸಿರುವ ಅಧ್ಯಾಪಕರು ಮತ್ತು ವಿದ್ಯಾರ್ಥಿನಿಯರು

